ಪತ್ರಿಕಾ ಪ್ರಕಟಣೆ

ಬಿ.ಪ್ಯಾಕ್ ಸಂಸ್ಥೆಯೂಸಿಜಿಐನ ಸಹಯೋಗದೊಂದಿಗೆ ಬಿಸೇಫ್ ಕ್ಷೇತ್ರ ಎಂಬ ಕಾರ್ಯಕ್ರಮವನ್ನು ಪ್ರಾರಂಭಿಸಿದೆ.

ಬಿ.ಸೇಫ್ ಕ್ಷೇತ್ರವು ಮಹಿಳೆಯರ ಸುರಕ್ಷತೆ ಮತ್ತು ಸಬಲೀಕರಣಕ್ಕಾಗಿಯಾಡಿರುವ ಕಾರ್ಯಕ್ರಮ

ಬೆಂಗಳೂರು, ನವೆಂಬರ್ 30, 2020: **ಬೆಂಗಳೂರು ರಾಜಕೀಯ ಕ್ರಿಯಾ ಸಮಿತಿ (ಬಿಪ್ಯಾಕ್)**, ವಿಶ್ವದಲ್ಲೇ ಅತಿದೊಡ್ಡ ಸ್ವತಂತ್ರ ಐಟಿ ಮತ್ತು ವ್ಯವಹಾರ ಸಲಹಾ ಸೇವಾ ಸಂಸ್ಥೆಗಳಲ್ಲಿ ಒಂದಾದ **ಸಿಜಿಐ**ನ ಸಹಭಾಗಿತ್ವದಲ್ಲಿ, ಬೆಂಗಳೂರಿನ ಮಹದೇವಪುರ ಮತ್ತು ಶಿವಾಜಿನಗರ ವಿಧಾನಸಭಾ ಕ್ಷೇತ್ರಗಳಿಗೆ ಬಿ.ಸೇಫ್ ಕ್ಷೇತ್ರವನ್ನು ಇಂದು ಪ್ರಾರಂಭಿಸಿತು.

ವರ್ಚುಯಲ್ ಕಾರ್ಯಕ್ರಮವನ್ನು **ಶ್ರೀ ಅರವಿಂದ ಲಿಂಬಾವಳಿ** ಶಾಸಕರು, ಮಹಾದೇವಪುರ ವಿಧಾನಸಭಾ ಕ್ಷೇತ್ರ ಮತ್ತು **ಶ್ರೀ ರಿಜ್ವಾನ್ ಅರ್ಷದ್,** ಶಾಸಕರು, ಶಿವಾಜಿನಗರ ವಿಧಾನಸಭಾ ಕ್ಷೇತ್ರ ಉದ್ಘಾಟಿಸಿದರು. ಕಾರ್ಯಕ್ರಮದ ಉದ್ಘಾಟನೆಯ ನಂತರ ***"ಮಾದರಿ ಕ್ಷೇತ್ರದ ಬಗ್ಗೆ ನಾಗರಿಕರ ನಿರೀಕ್ಷೆಗಳು ಮತ್ತು ಮಹಿಳಾ ಸುರಕ್ಷತೆ ಹಾಗೂ ಸಬಲೀಕರಣ"*** ಎಂಬ ವಿಷಯದ ಕುರಿತು ವರ್ಚುಯಲ್ ಸಂವಾದ ಕಾರ್ಯಕ್ರಮ ಆಯೋಜಿಸಲಾಗಿತ್ತು. ಇದರಲ್ಲಿ **ಶ್ರೀಮತಿ ಪ್ರಮೀಳ ನಾಯ್ಡು ಆರ್,** *ಅಧ್ಯಕ್ಷರು, ಕರ್ನಾಟಕ ರಾಜ್ಯ ಮಹಿಳಾ ಆಯೋಗ,* **ಶ್ರೀಮತಿ ಇಶಾ ಪಂತ್,** *ಐಪಿಎಸ್- ಡಿಸಿಪಿ ಕಮಾಂಡ್ ಸೆಂಟರ್, ಬೆಂಗಳೂರು ನಗರ ಪೊಲೀಸ್* ಮತ್ತು **ಶ್ರೀಮತಿ ತಾರಾ ಕೃಷ್ಣಸ್ವಾಮಿ,** ಪೊಲಿಟಿಕಲ್ ಶಕ್ತಿ ಹಾಗು ಸಿಟಿಜನ್ ಫಾರ್ ಬೆಂಗಳೂರು ಭಾಗವಹಿಸಿದ್ದರು.

ಸಾರ್ವಜನಿಕ ಸ್ಥಳಗಳಲ್ಲಿನ ಸುರಕ್ಷತೆಯು ಒಂದು ಸಂಕೀರ್ಣ ಸಮಸ್ಯೆಯಾಗಿದೆ, ಏಕೆಂದರೆ ಆ ಸಮಸ್ಯೆಯನ್ನು ಬಗೆಹರಿಸಲು ಅನೇಕ ಪಾಲುದಾರರು ಜವಾಬ್ದಾರರಾಗಿರುತ್ತಾರೆ ಅದಷ್ಟೇ ಅಲ್ಲದೆ ಸಮುದಾಯದ ಅಗತ್ಯತೆಗಳು ಮತ್ತು ದುರ್ಬಲ ಗುಂಪುಗಳನ್ನು ಅರ್ಥಮಾಡಿಕೊಳ್ಳಲು ನಮಗೆ ಅಂಕಿ ಅಂಶಗಳ ಕೊರತೆಯಿದೆ. ನಗರಗಳು ಸಮುದಾಯದೊಳಗಿನ ಮಹಿಳೆಯರಿಗೆ ಸುರಕ್ಷತೆ ಮತ್ತು ಲಿಂಗ ಸಂವೇದನೆ ಉಪಕ್ರಮಗಳ ಬಗ್ಗೆ ಜಾಗೃತಿ ಮೂಡಿಸಲು ಶಕ್ತಗೊಳಿಸಬೇಕಾಗಿದೆ.

ಇದನ್ನು ಕಾರ್ಯಗತಗೊಳಿಸಲು, ಬಿ.ಪ್ಯಾಕ್ ಸಂಸ್ಥೆಯು ಬಿ.ಸೇಫ್ ಕ್ಷೇತ್ರ ಎಂಬ ಕಾರ್ಯಕ್ರಮವನ್ನು ಪ್ರಾರಂಭಿಸಿದೆ. ಈ ಕಾರ್ಯಕ್ರಮದ ಭಾಗವಾಗಿ ಕ್ಷೇತ್ರ ಪರಿಶೋಧನೆ, ಸಮುದಾಯ ಜಾಗೃತಿ ಕಾರ್ಯಕ್ರಮಗಳು, ಕ್ರಿಯಾ ಯೋಜನೆಗಳು ಮತ್ತು ವಕಾಲತ್ತುಗಳ ಮೂಲಕ ಮಹಿಳೆಯರ ಸುರಕ್ಷತೆ ಮತ್ತು ಸಬಲೀಕರಣಕ್ಕಾಗಿ ವಿವಿಧ ಸರ್ಕಾರಿ ಇಲಾಖೆಗಳು, ಪ್ರಮುಖ ಪಾಲುದಾರರು ಮತ್ತು ವಿಷಯ ತಜ್ಞರು ಒಂದು ವೇದಿಕೆಯಲ್ಲಿ ಸೇರಿ ಸಮಸ್ಯೆಯನ್ನು ಅರ್ಥ ಮಾಡಿಕೊಳ್ಳಲು ಮತ್ತು ಅದಕ್ಕೆ ಸೂಕ್ತ ಪರಿಹಾರವನ್ನು ಕಂಡುಹಿಡಿಯಲು ಪ್ರಯತ್ನಿಸುತ್ತಾರೆ.

ಈ ಕಾರ್ಯಕ್ರಮವನ್ನು ಸರ್ಕಾರಿ ಸಂಸ್ಥೆಗಳು, ಸಮಾಲೋಚನಾ ಕೇಂದ್ರಗಳು, ಕಾನೂನು ಬೆಂಬಲ, ಪೊಲೀಸ್ ಅಧಿಕಾರಿಗಳು, ಯೋಜನೆಗಳ ಬಗ್ಗೆ ವಿಷಯ ತಜ್ಞರಿಂದ ತರಬೇತಿ ಪಡೆದ ಬಿ. ಸೇಫ್ ರಾಯಭಾರಿಗಳು ಮುನ್ನೆಡೆಸುತ್ತಾರೆ.

ಬಿ.ಸೇಫ್ ರಾಯಭಾರಿಗಳು ಇದರ ಮೇಲೆ ಕೆಲಸ ಮಾಡುತ್ತಾರೆ:

1. ಕ್ಷೇತ್ರದಲ್ಲಿನ ಸಾರ್ವಜನಿಕ ಸ್ಥಳಗಳಲ್ಲಿನ ಮಹಿಳಾ ಸುರಕ್ಷತೆಯ ಕುಂದು ಕೊರತೆಗಳನ್ನು ಗುರುತಿಸಿ ಮೊದಲೇ ವ್ಯಾಖ್ಯಾನಿಸಲಾದ ಕ್ರಿಯಾ ಯೋಜನೆಯ ಮೂಲಕ ಸರ್ಕಾರ ಮತ್ತು ಪ್ರಮುಖ ಪಾಲುದಾರರೊಂದಿಗೆ ಕೆಲಸ ಮಾಡುವುದು.
2. ಮಹಿಳೆಯರ ಸುರಕ್ಷತೆ ಹಾಗೂ ಸಬಲೀಕರಣಕ್ಕಾಗಿ ಜಾಗೃತಿ ಕಾರ್ಯಕ್ರಮಗಳು ಮತ್ತು ಸಂಪನ್ಮೂಲಗಳನ್ನು ಒದಗಿಸಲು ಕಾರ್ಯದಲ್ಲಿ ಕ್ಷೇತ್ರದ ಸಮುದಾಯವನ್ನು ತೊಡಗಿಸಿಕೊಳ್ಳುವುದು.

3. ಆ ಕ್ಷೇತ್ರದಲ್ಲಿ ಮಹಿಳ ಸುರಕ್ಷತೆ ಮತ್ತು ಸಬಲೀಕರಣವನ್ನು ಧನಾತ್ಮಕ ರೀತಿಯಲ್ಲಿ ಮುನ್ನೆಡೆಸುವುದು.

ಈ ಕಾರ್ಯಕ್ರಮಕ್ಕೆ ನೀಡಿದ ಬೆಂಬಲಕ್ಕಾಗಿ **ಶ್ರೀ ಅರವಿಂದ ಲಿಂಬಾವಳಿ** ಶಾಸಕರು ಮಹಾದೇವಪುರ ಹಾಗು **ಶ್ರೀ ರಿಜ್ವಾನ್ ಅರ್ಷದ್**, ಶಾಸಕರು ಶಿವಾಜಿನಗರ ಬಿ.ಪ್ಯಾಕ್ ಅಭಿನಂದಿಸುತ್ತದೆ. ಈ ಕಾರ್ಯಕ್ರಮದ ಪ್ರಾಯೋಜಕರಾದ ಸಿಜಿಐ ಗೂ ಕೂಡ ಬಿ.ಪ್ಯಾಕ್ ಧನ್ಯವಾದ ಅರ್ಪಿಸುತ್ತದೆ.

ಶಾಸಕರು ಮಹಾದೇವಪುರ **ಶ್ರೀ ಅರವಿಂದ್ ಲಿಂಬಾವಳಿ**ಅವರು "ಸಾರ್ವಜನಿಕ ಪ್ರದೇಶಗಳಲ್ಲಿ ಮತ್ತು ಮನೆಯೊಳಗೆ ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯಗಳ ವಿರುದ್ಧ ಸಮಾಜದಲ್ಲಿ ಇನ್ನೂ ಹೆಚ್ಚಿನ ಅರಿವು ಮೂಡಿಸುವ ಅವಶ್ಯಕತೆಯಿದೆ. ಬಿ.ಸೇಫ್ ಕ್ಷೇತ್ರ ಕಾರ್ಯಕ್ರಮ ನಗರವನ್ನು ಸುರಕ್ಷಿತಗೊಳಿಸಲು ಸಹಾಯ ಮಾಡಲಿದೆ."

ಶ್ರೀ ರಿಜ್ವಾನ್ ಅರ್ಷದ್, ಶಾಸಕ ಶಿವಾಜಿನಗರ "ಉದ್ಯೋಗದಲ್ಲಿ ತೊಡಗಿಸಿಕೊಂಡಿರುವ ಮಹಿಳೆಯರ ಪ್ರಮಾಣ ಶಿವಾಜಿನಗರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದೆ. ಅಲ್ಲದೆ ಹೆಚ್ಚಿನ ಸಂಖ್ಯೆಯಲ್ಲಿ ಶಿಕ್ಷಣ ಸಂಸ್ಥೆಗಳನ್ನು ಹೊಂದಿದೆ. ಬಿ.ಸೇಫ್ ಕ್ಷೇತ್ರ ಕಾರ್ಯಕ್ರಮವು ಮಹಿಳೆಯರು ನಿರ್ಭಯ ಮತ್ತು ಆತ್ಮವಿಶ್ವಾಸದಿಂದ ಓಡಾಡಲು ಸಹಾಯ ಮಾಡಲಿದೆ" ಹೇಳಿದರು.

"ನಾವು ಕೆಲಸ ಮಾಡುವ ಮತ್ತು ವಾಸಿಸುವ ಸಮುದಾಯಗಳಲ್ಲಿ ಉತ್ತಮ ಕಾರ್ಪೊರೇಟ್ ಪ್ರಜೆಯಾಗಿರಲು ಸಿಜಿಐ ಬದ್ಧವಾಗಿದೆ." *ಸಿಜಿಐನ ಏಷ್ಯಾ ಪೆಸಿಫಿಕ್ ಗ್ಲೋಬಲ್ ಡೆಲಿವರಿ ಸೆಂಟರ್ಸ್ ಆಫ್ ಎಕ್ಸಲೆನ್ಸ್ ಅಧ್ಯಕ್ಷರಾದ,* **ಜಾರ್ಜ್ ಮ್ಯಾಟ್ಟಕಲ್** ಹೇಳಿದರು. "ಮಹಿಳೆಯರ ಸುರಕ್ಷತೆಯನ್ನು ಉತ್ತೇಜಿಸಲು ಮತ್ತು ಮಹಿಳೆಯರಿಗೆ ಸಮಾನ ಅವಕಾಶವನ್ನು ಒದಗಿಸುವ ಅಂತರ್ಗತ ವಾತಾವರಣವನ್ನು ಉತ್ತೇಜಿಸಲು ಈ ಕಾರ್ಯಕ್ರಮವನ್ನು ಪ್ರಾರಂಭಿಸಿರುವ ಬಿ.ಪ್ಯಾಕ್ ಸಂಸ್ಥೆಯೊಂದಿಗೆ ನಾವೂ ಪಾಲುದಾರರಗಿರುವುದಕ್ಕೆ ನಮಗೆ ಖುಷಿಯಿದೆ ಎಂದು ಹೇಳಿದರು"

ಶ್ರೀಮತಿ ರೇವತಿ ಅಶೋಕ್, ಸಿಇಒ ಮತ್ತು ವ್ಯವಸ್ಥಾಪಕ ಟ್ರಸ್ಟಿ ಅವರು "ಬಿ.ಸೇಫ್ ಕ್ಷೇತ್ರ ಕಾರ್ಯಕ್ರಮವು ವಿವಿಧ ಆಡಳಿತ ಸಂಸ್ಥೆಗಳು, ತಜ್ಞರು, ಸ್ಥಳೀಯ ಸಮುದಾಯಗಳು ಮತ್ತು ಎಲ್ಲಕ್ಕಿಂತ ಮಿಗಿಲಾಗಿ ಚುನಾಯಿತ ಪ್ರತಿನಿಧಿಗಳ ಬೆಂಬಲದ ಭಾಗವಹಿಸುವಿಕೆಯ ಒಂದು ವಿಶಿಷ್ಟ ಮಿಶ್ರಣವಾಗಿದೆ" ಎಂದು ಹೇಳಿದರು.

ಹೆಚ್ಚಿನ ಮಾಹಿತಿಗಾಗಿ:
ಸಚಿನ್ ಎ ಟಿ | sachiin@bpac.in | 73495 42201
ಸಿರಿ | siri@bpac.in | 79757 20130
https://bpac.in/b-safe-constituency/

About B.PAC

Bangalore Political Action Committee (B.PAC) is a non-partisan nonprofit organization that aims to improve governance in Bengaluru and to enhance the quality of life of every citizen. B.PAC is specifically targeting good governance practices, integrity and transparency in all arms of the government, improving the quality of infrastructure in the city, and identification and support of strong candidates for public office at all levels of governance in Bengaluru city. Learn more at https://bpac.in/

About CGI:

Founded in 1976, CGI is among the largest independent IT and business consulting services firms in the world. With 76,000 consultants and other professionals across the globe, CGI delivers an end-to-end portfolio of capabilities, from strategic IT and business consulting to systems integration, managed IT and business process services and intellectual property solutions. CGI works with clients through a local relationship model complemented by a global delivery network that helps clients digitally transform their organizations and accelerate results. CGI Fiscal 2020 reported revenue is C$12.16 billion and CGI shares are listed on the TSX (GIB.A) and the NYSE (GIB). Learn more at cgi.com

In India, CGI employs more than 14,000 consultants across major cities who provide global delivery support to clients around the globe, ensuring close collaboration, accountability, flexibility, superior service and, most importantly, expected business results.